**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನಪಟ್ಟಣ**

**ಉಪಸ್ಥಿತರು: ಶ್ರೀಮತಿ ಉಷಾರಾಣಿ ಬಿ.ಎನ್,**

ಬಿ.ಎ ಎಲ್ಎಲ್.ಬಿ.,ಎಲ್.ಎಲ್.ಎಂ.,

**ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**ದಿನಾಂಕ: 07 ನೇ ಆಗಸ್ಟ್ 2024**

**ಅಸಲು ದಾವಾ ಸಂಖ್ಯೆ.250/2015**

**ವಾದಿಗಳು** : ಶ್ರೀ ಮುದ್ದಲಿಂಗೇಗೌಡ

-ವಿರುದ್ಧ -

**ಪ್ರತಿವಾದಿಗಳು** : ಶ್ರೀಮತಿ ಶಿವಲಿಂಗಮ್ಮ ಎಂ

**ಮದ್ಯಂತರ ಅರ್ಜಿ ಸಂಖ್ಯೆ-IX ಮತ್ತು X**

**ಅರ್ಜಿದಾರರು/ವಾದಿಗಳು :** ಶ್ರೀ ದೊಡ್ಡೋನು

**(ಪ್ರತಿನಿಧಿಸುವವರು ಶ್ರೀ.ಹೆಚ್.ಎಸ್.ಹೆಚ್. ವಕೀಲರು)**

**-- ವಿರುದ್ಧ --**

**ಎದುರುದಾರರು/**
**ಪ್ರತಿವಾದಿಗಳು** : ಶ್ರೀ ಕಟ್ಟಯ್ಯ

**(ಪ್ರತಿನಿಧಿಸುವವರು ಶ್ರೀ.ಟಿ.ಎಂ.ಎಲ್. ವಕೀಲರು)**

| | | |
|---|---|---|
| ಅರ್ಜಿಯ ಸ್ವರೂಪ | : | 18 ನಿಯಮ 17 ಸಹವಾಚಕ ಕಲಂ 151 |
| ಯಾವ ಪರಿಹಾರ ಕೋರಲಾಗಿದೆ | : | ಡಿಡಬ್ಲ್ಯೂ 1 ರವರ ಮರು ವಿಚಾರಣೆ |
| ಅರ್ಜಿ ಸಲ್ಲಿಸಿದ ದಿನಾಂಕ | : | 15.12.2023 |
| ಅರ್ಜಿಯ ಸಂಖ್ಯೆ | | VII |
| ತಕರಾರು ಸಲ್ಲಿಸಿದ ದಿನಾಂಕ | : | 22.06.2024 |
| ಆದೇಶದ ದಿನಾಂಕ | : | 25.06.2024 |

****

**ಮಧ್ಯಂತರ ಅರ್ಜಿ ಸಂಖ್ಯೆ IX ಮತ್ತು X ರ ಮೇಲಿನ ಆದೇಶಃ**

ಮಾನ್ಯ ವಾದಿ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ **IX** ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ 17 ರಡಿಯಲ್ಲಿ ಸಲ್ಲಿಸಿ, ಡಿ.ಡಬ್ಲ್ಯೂ-1 ರವರನ್ನು ವಿಚಾರಣೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೋರಿರುತ್ತಾರೆ.

2. ವಾದಿ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ **X** ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿ ಸಲ್ಲಿಸಿ, ವಾದ ಮಂಡನೆಯ ಹಂತದಿಂದ ಈ ದಾವೆಯನ್ನು ಪುನರ್ ತೆರೆಯಬೇಕೆಂದು ಕೋರಿರುತ್ತಾರೆ.

3. ಈ ಮಧ್ಯಂತರ ಅರ್ಜಿಗಳ ಜೊತೆಗೆ 1 ನೇ ಪ್ರತಿವಾದಿ ರವರು ಶಪಥಪತ್ರವನ್ನು ಸಲ್ಲಿಸಿ ಕಾರಣಗಳನ್ನು ತಿಳಿಸಿರುತ್ತಾರೆ. ಅದರಲ್ಲಿ ದಾವೆಗೆ ಸಂಬಂಧಪಟ್ಟಂತೆ ಈಗಾಗಲೇ ದಾವಾಕ್ಕೆ ಲಿಖಿತ ತಕರಾರನ್ನು ಸಲ್ಲಿಸಿದ್ದು ಹಾಗೂ ತಕರಾರಿನ ಸಮಯದಲ್ಲಿ ವಂಶವೃಕ್ಷದಲ್ಲಿ ತಿಳಿಸಿರುವ ವ್ಯಕ್ತಿಗಳನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡದೇ ಇರುವ ಕಾರಣದಿಂದ ಹಾಗೂ 1 ನೇ ಪ್ರತಿವಾದಿಯ ಮಕ್ಕಳುಗಳಿಗೆ ಸಂಬಂಧಿಸಿದ ವ್ಯಾಸಂಗ ದೃಢೀಕರಣ ಪತ್ರ್ರದ ದೃಢೀಕೃತ ದಾಖಲಾತಿಗಳನ್ನು ಸಲ್ಲಿಸಿದ್ದು ಸದರಿ ದಾಖಲಾತಿಗಳು ನಿಶಾನೆಗಳಾಗಿ ಗುರುತಿಸಲ್ಪಟ್ಟಿರುತ್ತವೆ. ಈ ದಾವಾಕ್ಕೆ ಸಂಬಂಧಪಟ್ಟಂತೆ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯ ತಾಯಿಯವರು ದಿ ಃ 27.01.2000 ರಲ್ಲಿ ಒಂದು ನೊಂದಾಯಿತ ದಾನಪತ್ರವನ್ನು ಮಗಳಾದ ನಿಂಗಮ್ಮನವರಿಗೆ ಮಾಡಿದ್ದು ಅಸಲು ದಾಖಲೆಯನ್ನು ಹಾಜರುಪಡಿಸಿದ್ದು ಅದು ನಿಶಾನೆಯಾಗಿ ಗುರುತಿಸಬೇಕಾಗಿರುತ್ತದೆ. ಸದರಿ ದಾಖಲೆಯು ದಾವಾಕ್ಕೆ ಸಂಬಂಧಪಟ್ಟಂತೆ ಸಂಪೂರ್ಣ ಮಾಹಿತಿಯನ್ನು ಸಹ ನೀಡುತ್ತದೆ. ಸದರಿ ಅರ್ಜಿಗಳಲ್ಲಿ ಕೋರಿರುವಂತೆ ಈ ದಾವೆಯನ್ನು ತನ್ನ ಪುನರ್ ವಿಚಾರಣೆಗಾಗಿ ಕರೆಯುವುದರಿಂದ ವಾದಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ, ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ತನಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

4. ಈ ಮಧ್ಯಂತರ ಅರ್ಜಿಗಳಿಗೆ ಮಾನ್ಯ ವಾದಿಗಳ ಪರ ವಕೀಲರು ತಮ್ಮ ತಕರಾರನ್ನು ಸಲ್ಲಿಸಿದ್ದು, ಅದರಲ್ಲಿ, 1 ನೇ ಪ್ರತಿವಾದಿಯರು ಸಲ್ಲಿಸಿದ ಅರ್ಜಿಗಳು ಸತ್ಯಾಂಶದಿಂದ ಕೂಡಿರುವುದಿಲ್ಲ, ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು, ವಜಾಕರಿಸಲು ಯೋಗ್ಯವಾಗಿದೆಯೆಂದು ತಿಳಿಸಿರುತ್ತಾರೆ. ಪ್ರತಿವಾದಿ ರವರು ದಾನಪತ್ರವನ್ನು ನಿಶಾನೆಯಾಗಿ ಗುರುತಿಸುವ ಸಲುವಾಗಿ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ದಾನಪತ್ರವು 1 ನೇ ಪ್ರತಿವಾದಿಯ ತಾಯಿಯವರು ಸದರಿ ದಾವೆಯು ಚಾಲ್ತಿಯಲ್ಲಿರುವ ಸಮಯದಲ್ಲಿ ಬರೆದ ದಾಖಲೆಯಾಗಿದ್ದು,ಅದನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಹಾಗೂ  ದಾವೆಯ ವಾದ ಮಂಡನೆಗೆ ಮುಂದುವರೆದ ಸಂದರ್ಭದಲ್ಲಿ ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ 1 ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದ 1 ನೇ ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ IX ಮತ್ತು X ನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

5. ಈ ಮಧ್ಯಂತರ ಅರ್ಜಿಗಳನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**<u>ಃಅಂಶಗಳುಃ</u>**

**1. ಮಧ್ಯಂತರ ಅರ್ಜಿ ಸಂಖ್ಯೆ IX ಮತ್ತು X ಪುರಸ್ಕಾರಗೊಳ್ಳಲು ಯೋಗ್ಯವಾಗಿವೆಯೇ?**

**2. ಮಾಡುವ ಆದೇಶ ಏನು?**

6. ವಾದಿ ಮತ್ತು ಪ್ರತಿವಾದಿಗಳ ಪರ ವಕೀಲರು ವಾದಮಂಡನೆ ಆಲಿಸಲಾಯಿತು.

7. ಈ ನ್ಯಾಯಾಲಯವು ಕಡತದಲ್ಲಿರುವ ಎಲ್ಲಾ ಸಂಗತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

**ಅಂಶ ಸಂಖ್ಯೆ1 ಃ ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ2 ಃ ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,**

## ಕಾರಣಗಳು

8. **ಅಂಶ ಸಂಖ್ಯೆ:1:** ವಾದಿಯು ಈ ದಾವೆಯನ್ನು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ಈ ದಾವೆಯು ವಾದ ಮಂಡನೆಯ ಹಂತಕ್ಕೆ ಬಂದ ಸಮಯದಲ್ಲಿ 1 ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿ, ವಾದ ವಂಡನೆ ಹಂತದಿಂದ ಡಿ.ಡಬ್ಲ್ಯೂ.1 ರವರನ್ನು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಕರೆಯಬೇಕೆಂದು ಕೋರಿರುತ್ತಾರೆ.

9. ವಾದಿ ಪರ ವಕೀಲರುತಕರಾರು ಸಲ್ಲಿಸಿ ಅರ್ಜಿಗಳನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

10. ಈಗಾಗಲೇ ಡಿ.ಡಬ್ಲ್ಯೂ.1 ರವರ ಮುಖ್ಯ ವಿಚಾರಣೆಗೆ ಸಾಕಷ್ಟು ಸಮಯಾವಕಾಶ ನೀಡಿಲಾಗಿರುತ್ತದೆ ಹಾಗೂ ಪ್ರಸ್ತುತ ಅರ್ಜಿ ಸಲ್ಲಿಸಿ ಡಿಡಬ್ಲ್ಯೂ 1 ರವರ ಮುಖ್ಯ ವಿಚಾರಣೆಗೆ ದಾವೆಯನ್ನು ಕರೆಯಬೇಕೆಂದು ಕೋರಿದ್ದು, ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಈ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸುವ ಅಗತ್ಯತೆ ಇರುತ್ತದೆ. ಅರ್ಜಿ ಸಲ್ಲಿಸಲು ಆಗಿರುವ ವಿಳಂಬವನ್ನು ವೆಚ್ಚವನ್ನು ಹಾಕುವ ಮೂಲಕ ಸರಿದೂಗಿಸಬೇಕಾಗಿರುತ್ತದೆ. ಈ ಕಾರಣದಿಂದಾಗಿ ಈ ನ್ಯಾಯಾಲಯವು **ಅಂಶ ಸಂಖ್ಯೆ:1 ನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.**

11. **ಅಂಶ ಸಂಖ್ಯೆ:2:-** ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ 17 ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಗಳ ಸಂಖ್ಯೆ: IX ಮತ್ತು IX ನ್ನು ರೂ.200/- ಗಳ ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ.**

**ಡಿ.ಡಬ್ಲ್ಯೂ.1 ರವರನ್ನು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಪುನರ್ ಕರೆಯಲಾಗಿದೆ.**

**ಈ ದಾವೆಯು 9 ವರ್ಷಗಳ ಹಳೆಯ ದಾವೆಯಾಗಿದ್ದು, ವಾದಿಯು ಅನವಶ್ಯಕವಾಗಿ ಸಮಯ ತೆಗೆದುಕೊಳ್ಳದೆ ಡಿ.ಡಬ್ಲ್ಯೂ.1 ರವರನ್ನು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಸೂಚಿಸಲಾಗಿದೆ.**

(ಬೆರಳಚ್ಚು ನಕಲುಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2024 ನೇ ಇಸವಿ ಆಗಸ್ಟ್ 07 ನೇ** ದಿನಾಂಕದಂದು ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

**(ಉಷಾರಾಣಿ ಬಿ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್? ಸಿ., ಚನ್ನಪಟ್ಟಣ.**

**ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ**
**(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)**

**ಆದೇಶ**

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ 17 ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಗಳ ಸಂಖ್ಯೆ: IX ಮತ್ತು IX ನ್ನು ರೂ.200/- ಗಳ ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ.

ಡಿ.ಡಬ್ಲ್ಯೂ.1 ರವರನ್ನು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಪುನರ್ ಕರೆಯಲಾಗಿದೆ.

ಈ ದಾವೆಯು 9 ವರ್ಷಗಳ ಹಳೆಯ ದಾವೆಯಾಗಿದ್ದು, ವಾದಿಯು ಅನವಶ್ಯಕವಾಗಿ ಸಮಯ ತೆಗೆದುಕೊಳ್ಳದೆ ಡಿ.ಡಬ್ಲ್ಯೂ.1 ರವರನ್ನು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಸೂಚಿಸಲಾಗಿದೆ.

further Chief of DW.1. 18.09.2024.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್. ಸಿ., ಚನ್ನಪಟ್ಟಣ.**